ದಿನಾಂಕ 10-12-2019 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

: ಪಾಟೀ ಸವಾಲುಃ ವಾದಿ ಪರ ವಕೀಲರಿಂದ :

ನಾನು ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತೇನೆ. ನಾನು ಕೃಷಿ ಕೆಲಸ ಇದ್ದಾಗ ಒಂದೆರಡು ತಿಂಗಳು ರಜೆ ಹಾಕಿ ಊರಿಗೆ ಬರುತ್ತೇನೆ. ನಾನು ಕಾಂಕ್ರೀಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತೇನೆ. ಯಾವುದೇ ಖಾಸಗಿ ಕಂಪನಿಯವರು ಎರಡು ತಿಂಗಳುಗಳ ಕಾಲ ರಜೆ ಕೊಡುವುದಿಲ್ಲಾ ಅಂದರೆ ಸರಿಯಲ್ಲಾ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ವಾದಿಯರ ದಾವೆಯು ಕಾಲ ಪರಿಮಿತಿ ಆತಂಕದಲ್ಲಿ ಇದೆ ಎಂದು ಬರೆದಿದ್ದು ಅದರ ಅರ್ಥ ನನಗೆ ಗೊತ್ತಾಗುವುದಿಲ್ಲಾ. ವಾದಿಯರು ದಾವೆಯಲ್ಲಿ ಅನಾವಶ್ಯಕ ಪಕ್ಷಗಾರರು ಅಂತಾ ನನಗೆ ಕಂಡು ಬಂದಿದೆ. ಆದ್ದರಿಂದ ಆ ರೀತಿ ಬರೆಸಿದ್ದೇನೆ. ನಾನು ವಕೀಲರ ಸಲಹೆ ಪಡೆದಿರುವುದಿಲ್ಲಾ, ನನಗೆ ಆ ರೀತಿ ಅನಿಸಿದೆ. ನಾನು ಕಾನೂನು ಪದವಿಯನ್ನು ಪಡೆದಿರುವುದಿಲ್ಲಾ. ನಮ್ಮ ಗ್ರಾಮಕ್ಕೂ ನೀರಲಗಿ ಗ್ರಾಮಕ್ಕೂ 10 ರಿಂದ 15 ಕಿಮೀ ದೂರ ಆಗುತ್ತದೆ ಅಂದರೆ ಸರಿಯಲ್ಲಾ, ನನಗೆ ಕಿಮೀ ಗೊತ್ತಾಗುವುದಿಲ್ಲಾ. ನನ್ನ ಸ್ವಂತ ಊರು ನೀರಲಗಿ ಗ್ರಾಮ ಇರುತ್ತದೆ.

1 ನೇ ಪ್ರತಿವಾದಿ ಮೊದಲು ನೀರಲಗಿ ಗ್ರಾಮದಲ್ಲಿ ವಾಸವಾಗಿದ್ದು, ಈಗ ಹಾವೇರಿಯಲ್ಲಿ ವಾಸವಾಗಿದ್ದಾರೆ. 1 ನೇ ಪ್ರತಿವಾದಿ ಕಳೆದ 8-10 ವರ್ಷಗಳಿಂದ ಹಾವೇರಿಯಲ್ಲಿ ವಾಸವಾಗಿದ್ದಾರೆ. 1 ನೇ ಪ್ರತಿವಾದಿಯ ಕುಟುಂಬಕ್ಕೆ ಪಿತ್ರಾರ್ಜಿತ ಆಸ್ತಿಗಳು ಬಂದಿರುತ್ತವೆ ಅಂದರೆ ಸರಿಯಲ್ಲಾ. ದಾವಾ ಷೆಡ್ಯೂಲ್-2 ಎ ಆಸ್ತಿಯು 1 ನೇ ಪ್ರತಿವಾದಿಯ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದಿರುತ್ತದೆ ಅಂದರೆ ಸರಿಯಲ್ಲಾ. 1 ನೇ ಪ್ರತಿವಾದಿಯ ಕುಟುಂಬಕ್ಕೆ ಎಷ್ಟು ಆಸ್ತಿಗಳು ಇವೆ ಅಂತಾ ನನಗೆ ಗೊತ್ತಿಲ್ಲಾ. 1 ನೇ ಪ್ರತಿವಾದಿಯ ಕುಟುಂಬಕ್ಕೆ ಯಾವ ಯಾವ ರೀತಿಯಲ್ಲಿ ಆಸ್ತಿಗಳು ಯಾವ ರೀತಿ ಬಂದಿರುತ್ತವೆ ಅಂತಾ ನನಗೆ ಗೊತ್ತಿಲ್ಲ ಅಂದರೆ ನಾನು ಖರೀದಿಸಿದ ಆಸ್ತಿ ಮಾತ್ರ ಹೇಗೆ ಬಂದಿರುತ್ತದೆ ಅಂತಾ ನನಗೆ ಗೊತ್ತಿದೆ ಅನ್ನುತ್ತಾರೆ ಉಳಿದ ಆಸ್ತಿಗಳು 1 ನೇ ಪ್ರತಿವಾದಿಗೆ ಯಾವ ರೀತಿಯಲ್ಲಿ ಆಸ್ತಿಗಳು ಯಾವ ರೀತಿ ಬಂದಿರುತ್ತವೆ ಅಂತಾ ನನಗೆ ಗೊತ್ತಿಲ್ಲ ನಾನು ಖರೀದಿ ಮಾಡಿದ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ.

1 ನೇ ಪ್ರತಿವಾದಿಯ ಕುಟುಂಬದ ಆಸ್ತಿಗಳು ನೀರಾವರಿ ಜಮೀನುಗಳು ಅಂದರೆ ಸರಿಯಲ್ಲಾ. 1 ನೇ ಪ್ರತಿವಾದಿಯು ತಮ್ಮ ಜಮೀನಿನಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ ಅಂದರೆ ನಿಜ. ಪಕ್ಕದಲ್ಲಿ ಹಳ್ಳ ಇರುವುದರಿಂದ ಅದನ್ನು ನೀರಾವರಿಗೆ ಬಳಸುತ್ತಾರೆ. ರೈತರು ತಮ್ಮ ಜಮೀನಿನಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುವುದರಿಂದ ರೈತರಿಗೆ ಹೆಚ್ಚಿನ ಆದಾಯ ಬರುತ್ತದೆ ಅಂದರೆ ಸರಿಯಲ್ಲಾ. 1 ನೇ ಪ್ರತಿವಾದಿಯು ದಾವಾ–2 ಬಿ ಆಸ್ತಿಯನ್ನು ಬಸಪ್ಪ ಮಹಾಲಿಂಗಪ್ಪ ಬಾಡದ ಎನ್ನುವವರಿಂದ ತಮ್ಮ ಕೃಷಿ ಆದಾಯದಿಂದ ಖರೀದಿಸಿದ್ದಾರೆ ಅಂದರೆ ಸರಿಯಲ್ಲ, ಅವರು ತಮ್ಮ ಸ್ವಂತ ಆದಾಯದಿಂದ ಖರೀದಿಸಿದ್ದಾರೆ ಅನ್ನುತ್ತಾರೆ. 1 ನೇ ಪ್ರತಿವಾದಿಯು ದಾವಾ–2 ಬಿ ಆಸ್ತಿಯನ್ನು ಬಸಪ್ಪ ಮಹಾಲಿಂಗಪ್ಪ ಬಾಡದ ಎನ್ನುವವರಿಂದ ಖರೀದಿಸುವಾಗ ನಾನು ಆ ಖರೀದಿ ವ್ಯವಹಾರದಲ್ಲಿ ಭಾಗವಹಿಸಿರಲಿಲ್ಲಾ.1 ನೇ ಪ್ರತಿವಾದಿಯು ಸದರಿ ಆಸ್ತಿಯನ್ನು ಖರೀದಿಸುವಾಗ ಎಲ್ಲಿಂದ ಹಣ ತಂದು ಕೊಟ್ಟು ಅಂತಾ ನನಗೆ ಗೊತ್ತಿಲ್ಲಾ. 1 ನೇ ಪ್ರತಿವಾದಿಯು ದಾವಾ–2 ಬಿ ಆಸ್ತಿಯನ್ನು ಯಾವ ಆದಾಯದ ಮೂಲದಿಂದ ಹಣ ತಂದು ಕೊಟ್ಟಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ. ನಾನು ದಾವಾ–2 ಬಿ ಆಸ್ತಿಯನ್ನು ಖರೀದಿಸುವಾಗ ವಕೀಲರ ಸಲಹೆಯನ್ನು ಪಡೆದಿರುವುದಿಲ್ಲಾ, ಊರ ಹಿರಿಯರ ಸಲಹೆ ಪಡೆದಿದ್ದೇನೆ. ಊರ ಹಿರಿಯರು ಕಾನೂನು ಪಂಡಿತರಲ್ಲಾ. ನಾನು ದಾವಾ–2 ಬಿ ಆಸ್ತಿಯನ್ನು 2 ನೇ ಪ್ರತಿವಾದಿಯಿಂದ ಖರೀದಿಸಿದ್ದೇನೆ. 2 ನೇ ಪ್ರತಿವಾದಿಯ ಹೆಸರಿಗೆ ದಾವಾ–2 ಬಿ ಆಸ್ತಿಯು ಯಾವ ರೀತಿಯಾಗಿ ಬಂದಿರುತ್ತದೆ ಮತ್ತು ಯಾರು ಯಾರು ಹಕ್ಕುದಾರರು ಅಂತಾ ನಾನು ವಿಚಾರ ಮಾಡಿದ್ದೇನೆ. ಆ ಬಗ್ಗೆ ನಾನು 1 ನೇ ಪ್ರತಿವಾದಿಯನ್ನೇ ವಿಚಾರ ಮಾಡಿದ್ದೇನೆ.1 ನೇ ಪ್ರತಿವಾದಿ ಯಿಂದ 2 ನೇ ಪ್ರತಿವಾದಿಗೆ ದಾವಾ–2 ಬಿ ಆಸ್ತಿಯು ಯಾವುದೇ ನ್ಯಾಯಾಲಯದ ಡಿಕ್ರಿಯ ಮೂಲಕವಾಗಲಿ ಅಥವಾ ನೊಂದಾಯಿತ ದಾಖಲೆಯ ಮೂಲಕ ವರ್ಗಾವಣೆಯಾಗಿಲ್ಲಾ ಅಂದರೆ ನಿಜ. 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಸರಿಗೆ ವರದಿಯ ಮೇರೆಗೆ ಖಾತಾ ವರ್ಗಾವಣೆ ಮಾಡಿಸಿದ್ದಾನೆ ಅಂದರೆ ಸರಿಯಲ್ಲಾ. ನೊಂದಾಯಿತ ದಾಖಲೆಯ ಮೂಲಕ ದಾಖಲೆ ಮಾಡಿಸಿದ್ದಾರೆ ಅಂತಾ ಸಾಕ್ಷಿ ಸ್ವತಃ ಹೇಳುತ್ತಾರೆ. 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಸರಿಗೆ ನೊಂದಾಯಿತ ಹಕ್ಕು ಬಿಟ್ಟು ಕೊಟ್ಟ ಪತ್ರ ಮಾಡಿಸಿದ್ದಾರೆ ಆ ಕಾಲಕ್ಕೆ ನಾನು ಹಾಜರಿರಲಿಲ್ಲಾ. 1 ನೇ ಪ್ರತಿವಾದಿಯು 2 ನೇ

ಪ್ರತಿವಾದಿಯ ಹೆಸರಿಗೆ ನೊಂದಾಯಿತ ಹಕ್ಕು ಬಿಟ್ಟು ಕೊಟ್ಟ ಪತ್ರ ಮಾಡಿಸಿದ ವಿಷಯ ನನಗೆ 1 ನೇ ಪ್ರತಿವಾದಿ ಹೇಳಿದ್ದಾರೆ. ಆ ದಾಖಲೆಯನ್ನು ನಾನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲಾ. ಆ ದಾಖಲೆಯನ್ನು ಹಾಜರು ಮಾಡಲು ಯಾವುದೇ ತೊಂದರೆ ಇರುವುದಿಲ್ಲಾ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಸರಿಗೆ ಕುಟುಂಬದ ವ್ಯವಸ್ಥಾಪನೆ ಸಲುವಾಗಿ ವರದಿ ಸಲ್ಲಿಸಿ ಖಾತಾ ವರ್ಗಾವಣೆ ಮಾಡಿಸಿದ್ದಾರೆ ಅಂತಾ ಬರೆಸಿದ್ದೇನೆ. ಆ ರೀತಿ ಬರೆಸಿರುವುದು ನಿಜವಿರುತ್ತದೆ. 1 ನೇ ಪ್ರತಿವಾದಿಯು ವಾಣಿಜ್ಯ ಬೆಳೆಗಳನ್ನು ಬೆಳೆಯುವುದರಿಂದ ಮತ್ತು ಅವರ ಮಕ್ಕಳು ದುಡಿಯುವುದರಿಂದ ಅವರಿಗೆ ಯಾವುದೇ ಹಣಕಾಸಿನ ತೊಂದರೆ ಬಂದಿರಲಿಲ್ಲಾ ಅಂದರೆ ಸರಿಯಲ್ಲಾ. 2006 ರಲ್ಲಿ 1 ನೇ ಪ್ರತಿವಾದಿ ಹಾವೇರಿಯಲ್ಲಿ ಮನೆ ಕಟ್ಟಿಸುತ್ತಾ ಇದ್ದರು. ಆದ್ದರಿಂದ ಅವರಿಗೆ ಹಣಕಾಸಿನ ತೊಂದರೆ ಇತ್ತು. ಆ ಬಗ್ಗೆ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲಾ. 1 ನೇ ಪ್ರತಿವಾದಿಯು 2000 ನೇ ಸಾಲಿನಲ್ಲಿ ಹಾವೇರಿಯಲ್ಲಿ ಮನೆ ಕಟ್ಟಿಸಿದ್ದಾನೆ ಅಂದರೆ ಸರಿಯಲ್ಲಾ. ನಾನು ಖರೀದಿಪತ್ರದಲ್ಲಿ 1 ನೇ ಪ್ರತಿವಾದಿಗೆ ಹಾವೇರಿಯಲ್ಲಿ ಮನೆ ಕಟ್ಟಿಸಲು ಹಣಕಾಸಿನ ತೊಂದರೆ ಇದೆ, ಆದ್ದರಿಂದ ಜಮೀನನ್ನು ಮಾರಾಟ ಮಾಡುತ್ತಿದ್ದಾರೆ ನಾನು ಹೇಳಿ ಬರೆಸಿರುವುದಿಲ್ಲಾ. ಸದರಿ ಕ್ರಯ ಪತ್ರಕ್ಕೆ 1 ನೇ ಪ್ರತಿವಾದಿಯ ಸಮ್ಮತಿ ಸಾಕ್ಷಿ ಅಂತಾ ಸಹಿ ಪಡೆದಿರುವುದಿಲ್ಲಾ. 2 ನೇ ಪ್ರತಿವಾದಿಯು ವಾದಿಯರ ಪರವಾಗಿ ಕ್ರಯ ಪತ್ರ ಬರೆದುಕೊಟ್ಟಿಲ್ಲಾ ಅಂದರೆ ನಿಜ 2 ನೇ ಪ್ರತಿವಾದಿಯು ದಾವಾ –2 ಬಿ ಆಸ್ತಿಯನ್ನು ನನಗೆ ಮಾರಾಟ ಮಾಡುವಾಗ ವಾದಿಯರು ಅಲ್ಪವಯಿಗಳು ಇದ್ದಾರೆ ಅಂತಾ ನ್ಯಾಯಾಲಯದಿಂದ ಪರವಾನಿಗೆ ಪಡೆದಿಲ್ಲಾ ಅಂದರೆ ನನಗೆ ಗೊತ್ತಿಲ್ಲಾ. 2006 ರಲ್ಲಿ ನೀರಲಗಿ ಗ್ರಾಮದಲ್ಲಿ 5 ರಿಂದ 6 ಲಕ್ಷ ರೂಪಾಯಿ ಮಾರುಕಟ್ಟೆ ಬೆಲೆ ಇತ್ತು ಅಂದರೆ ಸರಿಯಲ್ಲಾ. 50 ಸಾವಿರ ರೂಪಾಯಿ ಮಾತ್ರ ಇತ್ತು ಅನ್ನುತ್ತಾರೆ 1 ನೇ ಪ್ರತಿವಾದಿಯರ ಮಕ್ಕಳಾದ ರಾಜೇಶ್ವರಿ ಎನ್ನುವವರ ಹೆಸರು ಮಾತ್ರ ಗೊತ್ತಿದೆ ಉಳಿದವರ ಹೆಸರು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ವಿಭಕ್ತ ಸಂಪತ್ತು ಅಂತಾ ಬರೆದಿದ್ದು ಅದರ ಅರ್ಥ ನನಗೆ ಗೊತ್ತಿಲ್ಲಾ.

1 ನೇ ಪ್ರತಿವಾದಿಯು ದಾವಾ –2 ಬಿ ಆಸ್ತಿಯನ್ನು ಮಾರಾಟ ಮಾಡುತ್ತಿದ್ದ ಬಗ್ಗೆ ನಮ್ಮ ಚಿಕ್ಕಪ್ಪ ಶಾಂತಪ್ಪ ಎನ್ನುವವರಿಗೆ ಗೊತ್ತಿತ್ತು. ಅವರು ನನಗೆ ಹೇಳಿದ್ದಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪುಟ ಸಂಖ್ಯೆ-3 ಮೊದಲ ಸಾಲಿನಲ್ಲಿ 1 ಮತ್ತು 2 ನೇ ಪ್ರತಿವಾದಿಯರು ನನಗೆ ಭೆಟ್ಟಿಯಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇವೆ ಅಂತಾ ಹೇಳಿದ್ದಾರೆ ಅಂತಾ ಹೇಳಿ ಬರೆಸಿರುವುದು ಸುಳ್ಳು ಇರುತ್ತದೆ. ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಾನು ದಾವಾ–2 ಬಿ ಆಸ್ತಿಯನ್ನು ಖರೀದಿಸುವ ಮೊದಲು 2 ನೇ ಪ್ರತಿವಾದಿಯ ಹೆಸರಿಗೆ ಇದ್ದುದರ ಬಗ್ಗೆ ಖಚಿತಪಡಿಸಿಕೊಂಡಿದ್ದೇನೆ. ನಾನು ಯಾವ ದಾಖಲೆ ಅಂತಾ ನೋಡಿರುವುದಿಲ್ಲ. 2 ನೇ ಪ್ರತಿವಾದಿಯು ದಾವಾ –2 ಬಿ ಆಸ್ತಿಯನ್ನು ಪರಭಾರೆ ಮಾಡಲು ಯಾವುದೇ ಅಧಿಕಾರ ಇರಲಿಲ್ಲಾ ಅಂದರೆ ಸರಿಯಲ್ಲಾ. ನನ್ನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಾನು ಸದ್ಭಾವನೆಯುಕ್ತ ಖರೀರಿದಿದಾರ ಅಂತಾ ಹೇಳಿ ಬರೆಸಿರುವುದಿಲ್ಲಾ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಸರಿಗೆ ಖಾತಾ ವರ್ಗಾವಣೆ ಮಾಡಿರುವುದು ಕಾನೂನುಬದ್ಧ ವಾಗಿಲ್ಲಾ ಅಂದರೆ ಸರಿಯಲ್ಲಾ. ನಾನು ದಾವಾ–2 ಬಿ ಆಸ್ತಿಯನ್ನು ಖರೀದಿಸುವ ಕಾಲಕ್ಕೆ ವಾದಿಯರು ಅಲ್ಪವಯಿಗಳು ಇದ್ದರು. 2 ನೇ ಪ್ರತಿವಾದಿಯಿಂದ ನಾನು ಮಾಡಿಸಿಕೊಂಡ ಖರೀದಿಪತ್ರವು ವಾದಿಯರಿಗೆ ಬಂಧನಕಾರಿಯಾಗುವುದಿಲ್ಲಾ ಅಂದರೆ ನಿಜ. ಸಾಕ್ಷಿಯು ಅವರು ಸಂಬಂಧ ಇರುವುದಿಲ್ಲಾ ಅಂತಾ ಸ್ವಇಚ್ಛೆಯಿಂದ ಹೇಳುತ್ತಾರೆ.

<u>ಪಾಟೀ ಸವಾಲುಃ 5 ಮತ್ತು 7 ನೇ ಪ್ರತಿವಾದಿಯರ ಪರವಾಗಿ ಶ್ರೀ ಜಿ ವಿ ಕೆ ವಕೀಲರಿಂದ</u>

5 ನೇ ಪ್ರತಿವಾದಿಯ ಆಸ್ತಿಯ ಸರ್ವೆ ನಂ. 56/8 ಮತ್ತು ಸರ್ವೆ ನಂ.56/9 ಗಳು ನಮ್ಮ ಜಮೀನಿನ ಪೂರ್ವದ ಕಡೆಗ ಬರುತ್ತದೆ. 5 ನೇ ಪ್ರತಿವಾದಿಯು ಸದರಿ ಆಸ್ತಿಗಳನ್ನು ಖರೀದಿಸಿದ ನಂತರ ನಾನು ಖರೀದಿಸಿದ್ದೇನೆ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ  ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ